**ಇಂದು ದಿನಾಂಕ 27.03.2026 ರಂದು ಡಿಡಬ್ಲ್ಯೂ -3 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ಪ್ರಮಾಣ ಪತ್ರದ ಮಾಹಿತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ಐಟಂ ನಂ.2 ಆಸ್ತಿಯನ್ನು ಖರೀದಿ ಮಾಡುವ ಮೊದಲು ನಾನು ಜಮೀನಿನ ನಕಲು ಪ್ರತಿಯನ್ನು ನೋಡಿದ್ದೇನೆ. ಸರಿಯಾಗಿ ಇದೆ ಎಂದ ಕಾರಣ ಖರೀದಿಸಿದ್ದೇನೆ. ವಿಭಾಗ 1977 ರಲ್ಲಿ ಮಾಡಿಕೊಂಡಿದ್ದಾರೆ ದಿನಾಂಕ ಗೊತ್ತಿಲ್ಲ. ವಿಭಾಗ ಪತ್ರವನ್ನು ನಾನು ನೋಡಿದ್ದೇನೆ. ಯಾರು ವಿಭಾಗ ಮಾಡಿಕೊಂಡಿದ್ದಾರೆ ಯಾರಿಗೆ ಎಷ್ಟು ಸ್ವತ್ತು ಬಂದಿದೆ ಎಂದು ಗೊತ್ತಿಲ್ಲ. ವಿಭಾಗ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂ.59/3 ಪೂರ್ಣ ಮುನಿವೆಂಕಟಪ್ಪನ ಭಾಗಕ್ಕೆ ಹೋಗಿದೆ. ವಿಭಾಗ ಪತ್ರವನ್ನು ನಾನೇ ಖುದ್ದಾಗಿ ಹಾಜರು ಮಾಡಿದ್ದೇನೆ. ಐಟಂ ನಂ.2 ಆಸ್ತಿಯನ್ನು ಬಿಟ್ಟು ಬೇರೆ ಯಾವ ಆಸ್ತಿಗಳು ಇವೆ ಎಂದರೆ ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿ ಮತ್ತು 1 ರಿಂದ 11 ನೇ ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ನಾವೇ ಇದ್ದೇವೆ ಎನ್ನುತ್ತಾರೆ. ಅವರ ಬೇರೆ ಆಸ್ತಿಗಳಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ. ನಾನು ಖರೀದಿ ಮಾಡಿದಾಗ ಅವರ ಒಟ್ಟು ಕುಟುಂಬದ ಸದಸ್ಯರನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಲು ತೊಂದರೆ ಇರಲಿಲ್ಲ. ಮುನಿವೆಂಕಟಪ್ಪನನ್ನು ಅವರ ಕಡೆಯಿಂದ ನೋಂದಣಿ ಮಾಡಿಸಿಕೊಡಿ ಎಂದು ಕೇಳಿಲ್ಲ ಪಾರ್ವತಮ್ಮನನ್ನು ಕೇಳಿದ್ದೆನು. ಐಟಂ ನಂ.2 ಆಸ್ತಿ ಮುನಿವೆಂಕಟಪ್ಪನವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಅವರ ಸ್ವಂತ ಆಸ್ತಿ ಎಂದು ನಮಗೆ ಮಾರಾಟ ಮಾಡಿದ್ದಾರೆ. ಐಟಂ ನಂ.2 ಆಸ್ತಿಯನ್ನು ಮಾರಾಟ ಮಾಡಿ ಅವರು ಅವರ ಹೆಂಡತಿ ಮಕ್ಕಳಿಗೆ ಮಾತ್ರ ಖರ್ಚು ಮಾಡಿದ್ದಾರೆ ವಾದಿ ಮತ್ತು ಇತರೆ ಪ್ರತಿವಾದಿಗಳಿಗೆ ಖರ್ಚು ಮಾಡಿಲ್ಲ ಎಂದರೆ ಗೊತ್ತಿಲ್ಲ. ಪಾರ್ವತಮ್ಮನ ಹೆಸರಿಗೆ ಮಾರಾಟ ಮಾಡುವ ಮೊದಲು ಮುನಿವೆಂಕಟಪ್ಪನ ಹೆಸರಿಗೆ ಪೌತಿ ಖಾತೆಯ ಮೂಲಕ ಆಸ್ತಿ ನಮೂದಾಗಿತ್ತು ಎಂದರೆ ನಿಜ. ಅವರ ತಂದೆ ತೀರಿಕೊಂಡ ನಂತರ ಅವರ ಹೆಸರಿಗೆ ಬಂದಿತ್ತು ಎಂದರೆ ನಿಜ. ಸದರಿ ಆಸ್ತಿ ವಾದಿ ಮತ್ತು ಇತರೆ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಮುನಿವೆಂಕಟಪ್ಪನವರು ವಾದಿ ಮತ್ತು ಇತರೆ ಪ್ರತಿವಾದಿಗಳ ಅನುಮತಿ ಪಡೆಯದೆ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಐಟಂ ನಂ.2 ಆಸ್ತಿಯಲ್ಲಿ ಈಗಲೂ ಸಹ ವಾದಿ ಮತ್ತು ಇತರೆ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ನಾವೇ ಇದ್ದೇವೆ. ಐಟಂ ನಂ.2 ಆಸ್ತಿಯಲ್ಲಿ ವಾದಿ ಮತ್ತು ಇತರೆ ಪ್ರತಿವಾದಿಯರಿಗೆ ಹಕ್ಕು ಇದ್ದರೂ ಮಾರಾಟ ಮಾಡಿದ್ದಾರೆ

ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಬಿಟ್ಟು ವಾದಿ ಕುಟುಂಬಕ್ಕೆ ಬೇರೆ ಆಸ್ತಿಗಳು ಇವೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ಯಾವ ವ್ಯಕ್ತಿಗಳನ್ನು ಸೇರಿಸಬೇಕೆಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಕ್ರಯಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**